ಉಪಯೋಗವಿಲ್ಲ. ಶೇಷು ಹೇಳಿದಂತಹ ಹಾವಿರಲಿ ಒಂದು ಹುಳವೂ ಕಣ್ಣಿಗೆ ಬೀಳಲಿಲ್ಲ. ಒಂದು ಪ್ರಾಜೆಕ್ಟ್ ಮುಗಿದರೆ ಸಾಕು, ಹೊಸ ಕೆಲಸದ ಶೋಧಕ್ಕಿಳಿಯುತ್ತಿದ್ದ ನಾನು ಒಂದು ವಾರವಾದರೂ ಮನೆಯಲ್ಲೂ ಕೂರದೆ ನಮ್ಮ ಊರಲ್ಲಿ ಗಿರಕಿ ಹೊಡೆಯುತ್ತಿರುವುದರ ಬಗ್ಗೆ ನನ್ನಾಕೆಗೂ ಅನುಮಾನ ಶುರುವಾಗಿತ್ತು. ಅವಳು ಇನ್ನಿಲ್ಲದ ಹಾಗೆ ಬಾಯಿ ಬಿಡಿಸಲು ಪ್ರಯತ್ನಿಸಿದಳು. ಅವಳಿಗೆ ಹೊಸಕತೆಯ ತಲಾಶಿನಲ್ಲಿರುವುದಾಗಿ ಹೇಳಿ ನಂಬಿಸಿದೆ. ಹುಡುಕಾಡಿದ್ದೇ ಬಂತು. ನಮ್ಮೂರನ್ನು ಪೂರ್ತಿಯಾಗಿ ಸರ್ವೆ ಮಾಡಿ ಮುಗಿಸಿದೆ. ನಮ್ಮ ಊರಿನ ಮೂಲೆ ಮೂಲೆಗಳು ಮೊದಲ ಬಾರಿಗೆ ಪರಿಚಯವಾದವು. ಅಕ್ಕಪಕ್ಕದ ಊರುಗಳಲ್ಲೂ ಮತ್ತೊಂದು ವಾರ ಅಲೆದೆ. ಏನು ಮಾಡಲಿ? ಅವನು ಹುಟ್ಟಿಸಿದ ಆಸೆಯೇನು ಕಡಿಮೆಯೇ? ಐದು ಕೋಟಿ! ಮತ್ತೆ ಮತ್ತೆ ಹುಡುಕಿದರೂ ಏನೂ ಪ್ರಯೋಜನವಾಗಲಿಲ್ಲ. ಅವನು ಫೋನ್ ಮಾಡಿದಾಗ ಊರಿನ ಹೊರವಲಯದ ಇಂಚಿಂಚೂ ಶೋಧಿಸಿದ್ದನ್ನ ಹೇಳಿದೆ. ವಾರದ ಹಿಂದೆ ನಿಮ್ಮೂರಿನ ಚರ್ಚ್ ಬಳಿಯಿಂದ ಒಬ್ಬ ಒಂದು ಹಾವನ್ನ ತಂದು ನಮ್ಮ ಪಾರ್ಟಿಗೆ ಸೇಲ್ ಮಾಡಿದಾನೆ ಎಂದು ಹೇಳಿ ನನ್ನನ್ನು ಬೇಸ್ತು ಬೀಳಿಸಿದ.

ಮತ್ತೆ ಅವನೇ ನಿಮಗೆ ನಿಮ್ಮ ಊರಲ್ಲಿ ಲಕ್ ಇದ್ದ ಹಾಗಿಲ್ಲ ನಿಮ್ಮ ತಂಗಿಯನ್ನು ಕೊಟ್ಟಿರೋ ಊರಲ್ಲಿ ಈ ಹಾವುಗಳು ಹೇರಳವಾಗಿ ಸಿಗುತ್ತವೆ, ಅಲ್ಲಿ ಪ್ರಯತ್ನಿಸಿ ಎಂದು ಸಲಹೆ ಕೊಟ್ಟ. ನಾನು ನೇರವಾಗಿ ಆ ಊರಗೆ ಹೋಗಿ ಹುಡುಕುವ ಹಾಗಿಲ್ಲ... ನಮ್ಮ ಭಾವನ ಸಹಾಯ ಬೇಕೇ ಬೇಕೆಂದು ಕೊನೆಗೂ ಅಳೆದೂ ತೂಗಿ ನನ್ನ ತಂಗಿಯ ಗಂಡ ಏನಾದರೂ ಅಂದುಕೊಳ್ಳಲಿ ಎಂದು ನಿರ್ಧರಿಸಿ ಆತನೊಂದಿಗೆ ವಿಷಯದ ಪ್ರಸ್ತಾಪ ಮಾಡಿದೆ. ಆತ ತಮಾಷೆ ಮಾಡುತ್ತಾನೋ? ಈ ಕಾಲದಲ್ಲಿ ಇದು ಸಾಧ್ಯವೇ ಎಂದು ನನ್ನ ಬುದ್ಧಿಯ ಸ್ತಿಮಿತವನ್ನೇ ಅಳೆದುನೋಡುತ್ತಾನೋ? ಎಂಬ ಅನುಮಾನಗಳೆಲ್ಲ ಮನದಲ್ಲಿ ಸುಳಿದವು. ಆದರೆ ಅಂತಹದೇನೂ ಆಗದೆ, ಆತ ನೇರವಾಗಿ, ''ಆಯ್ತು ಭಾವ ನಾನು ಇವತ್ತೆ ನನ್ನ ತಮ್ಮ ಗಂಗಿ ರೆಡ್ಡಿಗೆ ಹೇಳುತ್ತೇನೆ, ಆದ್ರೆ ಹಾವು ಸಿಕ್ಕಿದೊಡನೆ ನನಗೆ ಮೂರನೇ ಒಂದು ಭಾಗ ಬಂದು ಬಿಡಬೇಕು'' ಎಂದು ನೇರವಾಗಿ ವ್ಯವಹಾರಕ್ಕಿಳಿದ! ಈಗಿನ ಕಾಲದ ಹುಡುಗರಲ್ಲವೆ! ನನಗೆ ಶೇಷು ಏನೆಂದುಕೊಳ್ಳುತ್ತಾನೋ ಎಂಬ ಮುಜುಗರ. ಭಾವಭಾವಂದಿರು ಒಂದಾಗಿ ಬೇಕೆಂದೇ ಎರಡು ಪಾಲನ್ನು ಮೂರು ಪಾಲು ಮಾಡ್ತಿದಾರೆ ಎಂಬ ಸಂದೇಹ ಅವನ ಮನಸ್ಸಲ್ಲಿ ಬಂದುಬಿಟ್ಟರೆ ಹೇಗಪ್ಪ ಎಂಬ ಯೋಚನೆ ಶುರುವಾಯ್ತು. ತಡಮಾಡದೆ ಆಗಿದ್ದಾಗಲಿ ಎಂದು ಅವನಿಗೆ ಫೋನ್ ಮಾಡಿದೆ. ''ತಲೆ ಕೆಡಿಸ್ಕೊಳ್ಳೋದು ಬೇಡ ಬಿಡಿ ಸಾರ್, ಅವ್ರಿಗೂ ಒಂದು ಶೇರ್ ಕೊಟ್ರಾಯ್ತು, ಒಂದ್ವೇಳೆ ನಾವು ತೆಗೆಯೋ ಸಿನಿಮಾಗೆ ಫೈನಾನ್ಸ್ ಪ್ರಾಬ್ಲಮ್ ಆದ್ರೆ ಅವ್ರನ್ನೇ ಫೈನಾನ್ಶಿಯರ್ ಆಗಿ ಇಂಡಸ್ಟ್ರಿಗೆ ಇಂಟ್ರಡ್ಯೂಸ್ ಮಾಡಿದ್ರಾಯ್ತು...'' ಎಂದು ಸರಳವಾಗಿ ಪರಿಹಾರ ಹೇಳಿದ.

ಕೋಟಿಗಳೆಂದರೆ ಯಾರಿಗೆ ಬೇಡ? ನಮ್ಮ ಭಾವನೂ ಸಹ ಬಹು ಅಕ್ಕರಾಸ್ತೆಯಿಂದ ದಿನಕ್ಕೆ ಆರೇಳು ಸಲ ಫೋನ್ ಮಾಡಿ, ಊರಲ್ಲಿರುವ ತಮ್ಮನಿಗೆ 'ಊಟ ಬೇಕಾದ್ರೆ ಹೊಲದತ್ರಾನೇ ತಗೊಂಡೋಗು, ಅಲ್ಲೇ ಸುತ್ತಮುತ್ತ ಇರೋ ಪಾಳು ಜಾಗ, ಗೋಮಾಳ ಇಲ್ಲೆಲ್ಲ ಹುಡುಕು' ಎಂದು ತಾಕೀತು ಮಾಡುತ್ತಿದ್ದ. ಇತ್ತ ಶೇಷು ದಿನಕ್ಕೆ ಐದಾರು ಸಲವಾದರೂ ಫೋನ್ ಮಾಡಿ, ''ಸಿಕ್ತಾ ಸಿಕ್ತಾ ಎಂದು ತಲೆ ತಿನ್ನುತ್ತಿದ್ದ. ಇನ್ನೂ ಸಿಗಲಿಲ್ಲ, ಸಿಗಬಹುದು, ಹುಡುಕಾಟ ನಡೆದಿದೆ ಎಂದು ಹೇಳುತ್ತಿದ್ದೆ. ಮಾರನೇ ದಿನ ಫೋನ್ ರಿಂಗಾದೊಡನೆ ಬಹುಶಃ ಹಾವು ಸಿಕ್ಕಿರುವ ಸುದ್ದಿ